# ಪಡಿ ಮಂಗಳೂರು

## ಗುಣಾತ್ಮಕ ಶಿಕ್ಷಣಕ್ಕಾಗಿ ಮಕ್ಕಳ ಸ್ನೇಹಿ ಸಮಾಜ ನಿರ್ಮಾಣ

## ರಾಷ್ಟ್ರೀಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದಿಂದ ಮಗುವಿನ ದೈಹಿಕ ದಂಡನೆ (Corpoiral Punishment) ಕುರಿತು ಪ್ರಕಟಿಸಲಾದ ಮಾರ್ಗಸೂಚಿಗಳು

### ದೈಹಿಕ ದಂಡನೆಯ ವ್ಯಾಖ್ಯಾನ

* ದೈಹಿಕ ದಂಡನೆಯನ್ನು RTE Act 2009 (Section - 17) ರ ದೈಹಿಕ ದಂಡನೆ, ಮಾನಸಿಕ ಪೀಡನೆ ಹಾಗೂ ತಾರತಮ್ಯ - ಎಂಬುದಾಗಿ ವಿಭಾಗಿಸುತ್ತದೆ.
* ದೈಹಿಕ ದಂಡನೆಯೆಂದರೆ ಮಗುವಿಗೆ, ನೋವು ಗಾಯ ಅಥವಾ ಯಾವುದೇ ಕಿರಿಕಿರಿ ಉಂಟುಮಾಡುವ ಕೃತ್ಯ.
* ಹೊಡೆಯುವುದು, ಒದೆಯುವುದು, ಚಿವುಟುವುದು, ಪರಚುವುದು, ಕಚ್ಚುವುದು, ಕೂದಲು ಚಗ್ಗುವುದು, ಕಿವಿ ಹಿಂಡುವುದು, ಗುದ್ದುವುದು, ಕಪಾಲಕ್ಕೆ ಹೊಡೆಯುವುದು, ಚಾಕ್, ಬೆತ್ತ ಅಥವಾ ಯಾವುದೇ ವಸ್ತುವನ್ನು ಮಗುವಿಗೆ ಎಸೆಯುವುದು, ವಿದ್ಯುತ್ ಶಾಕ್ ಕೊಡುವುದು, ಬೆಲ್ಟ್ ಬೀಸುವುದು ಇತ್ಯಾದಿ. ಬೇಡವಾದ ಅಪಾಯಕಾರಿ ವಸ್ತುಗಳಾದ ಸಾಬೂನು, ಖಾರದಪುಡಿ, ಮಣ್ಣು, ಚಾಕ್ ಪೌಡರ್ ಇತ್ಯಾದಿ ಮಗುವಿನ ಮೇಲೆ ಹಾಕುವುದು, ಮಗುವನ್ನು ಗ್ರಂಥಾಲಯ, ಶೌಚಾಲಯ, ತರಗತಿಯಲ್ಲಿ ಕೂಡಿ ಹಾಕುವುದು.

### ದೈಹಿಕ ಹಿಂಸೆ ಬಗ್ಗೆ ಕೆಲವು ಸಾಮಾನ್ಯ ನಂಬಿಕೆಗಳು

* ಮಕ್ಕಳನ್ನು ದಂಡಿಸುವುದು ಸಾಮಾನ್ಯ ಮತ್ತು ಒಪ್ಪಿಕೊಂಡಿರುವ ಸಂಗತಿ.
* ಶಿಕ್ಷಕರು ಮತ್ತು ಪಾಲಕರು ತಮ್ಮ ಅಧಿಕಾರವನ್ನು ತೋರಿಸಲು ದೈಹಿಕ ದಂಡನೆಯನ್ನು ಉಪಯೋಗಿಸುವುದು ದಿನನಿತ್ಯದ ಸಂಸ್ಕೃತಿಯ ಭಾಗವಾಗಿದೆ.
* ದೈಹಿಕ ದಂಡನೆ ಜೀವನ ಸಂಸ್ಕೃತಿಯಲ್ಲಿ ಹಾಸು ಹೊಕ್ಕಾಗಿರುವುದರಿಂದ ಇದು ಮಗುವಿನ ಹಕ್ಕುಗಳ ಉಲ್ಲಂಘನೆ ಎಂಬುವುದು ಪರಿಗಣಿಸಲ್ಪಟ್ಟಿಲ್ಲ ಹಾಗೂ ಮಗು ಇದರ ಬಗ್ಗೆ ಯಾರಿಗೂ ಹೇಳುವುದಿಲ್ಲ.
* ಪ್ರೀತಿ, ಪೋಷಣೆ ಹಾಗೂ ರಕ್ಷಣೆಯ ನೆಪದಲ್ಲಿ ಮಕ್ಕಳನ್ನು ದಂಡಿಸುವುದು ಮಗುವನ್ನು ರಕ್ಷಿಸುವವರು ಅವರ ಅಧಿಕಾರವನ್ನು ದುರುಪಯೋಗಪಡಿಸಿರುವುದನ್ನು ಸಮರ್ಥಿಸಿಕೊಳ್ಳುತ್ತದೆ. ಇಂತಹ ಭಾವನೆಗಳನ್ನು ಗಂಭೀರವಾಗಿ ಪರಿಗಣಿಸುವುದು ಮಕ್ಕಳ ರಕ್ಷಣೆಯ ದೃಷ್ಟಿಯಿಂದ ಅಗತ್ಯವೆನಿಸಿದೆ.
* ದೈಹಿಕ ಹಿಂಸೆ ಅನುಭವಿಸಿದ ಮಕ್ಕಳು ಸಂಘರ್ಷವನ್ನು ಸಮಸ್ಯೆಗಳನ್ನು ಪರಿಹರಿಸಲು ಕ್ರೌರ್ಯದ ಹಾದಿಯನ್ನು ಉಪಯೋಗಿಸುತ್ತಾರೆ. ಇದು ಇತರರ ಹಕ್ಕುಗಳ ಉಲ್ಲಂಘನೆ ಎಂಬ ಭಾವನೆ ಅವರಲ್ಲಿ ಇರುವುದಿಲ್ಲ.
* ದೈಹಿಕ ಹಿಂಸೆಗೂ ಮಕ್ಕಳಲ್ಲಿ ಹೊಂದಾಣಿಕೆ ಹಾಗೂ ಕೆಟ್ಟ ನಡತೆಗೂ ನೇರ ಸಂಬಂಧವಿದೆ.
* ಮಕ್ಕಳನ್ನು ಮಾನಸಿಕವಾಗಿ ಪೀಡಿಸುವುದು, ಬೈಯ್ಯುವುದು ಅಥವಾ ಮಗುವನ್ನು ಕಡೆಗಣಿಸುವುದರಿಂದ ಮಕ್ಕಳಲ್ಲಿ ಹದಿಹರೆಯದ ನಡವಳಿಕೆ ಸಮಸ್ಯೆಗಳು ಕಾಣಿಸಿಕೊಳ್ಳುತ್ತವೆ.
* ಮಾನಸಿಕ ಹಿಂಸೆ ಮಗುವಿನ ಅಸ್ತಿತ್ವ, ಸ್ವಪ್ರತಿಷ್ಠೆ ಹಾಗೂ ವೈಯಕ್ತಿಕ ಸುರಕ್ಷತೆಯನ್ನು ನಾಶಪಡಿಸುತ್ತಾರೆ.

### ಮಗುವಿನ ಭವಿಷ್ಯದ ಮೇಲೆ ದೈಹಿಕ ದಂಡನೆಯ ಪರಿಣಾಮಗಳೇನು?

* ಪ್ರಪಂಚದಾದ್ಯಂತ ಮಕ್ಕಳಿಗೆ ನೀಡುವ ಯಾವುದೇ ತರಹದ ದಂಡನೆ/ಹಿಂಸೆ ಮಗುವಿನ ಸರ್ವತೋಮುಖ ಬೆಳವಣಿಗೆಯಲ್ಲಿ ಋಣಾತ್ಮಕ ಪರಿಣಾಮಗಳಿರುವುದು ಒಪ್ಪಿಕೊಂಡಿರುವಂತಹ ಸಂಗತಿ.
* ಹಿರಿಯರು ಹೊಡೆಯುವುದು / ದಂಡಿಸುವುದು / ಹಿಂಸಿಸುವುದು ಮಕ್ಕಳಿಗೆ ಸಂಘರ್ಷವನ್ನು ಹತ್ತಿಕ್ಕಲು ಹೊಡೆಯುವುದು, ಬಡಿಯುವುದು, ಸರಿಯಾದ ವಿಧಾನವೆಂಬುದನ್ನು ಕಲಿಸುತ್ತದೆ. ಹೆಚ್ಚು ಹೊಡೆಸಿಕೊಂಡ ಮಕ್ಕಳು ದೊಡ್ಡವರಾದಾಗ ಹೆಚ್ಚು ಸಿಟ್ಟು/ಕ್ರೌರ್ಯವನ್ನು ತೋರಿಸುವುದು ವರದಿಯಾಗಿದೆ. ಅವರು ಹಿರಿಯರಾದಾಗ ಅವರು ಉಪಯೋಗಿಸುವ ವಿಧಾನ ಕ್ರೌರ್ಯ / ದಂಡನೆ.
* ದೈಹಿಕ ದಂಡನೆ ಮಗುವಿನ ಮೇಲೆ ದೈಹಿಕ, ಮಾನಸಿಕ ಮತ್ತು ಶೈಕ್ಷಣಿಕ ಪರಿಣಾಮ / ಹಿನ್ನಡೆ ಉಂಟುಮಾಡುತ್ತದೆ.
* ಮಗುವಿನಲ್ಲಿ ಸಿಡುಕು ಮತ್ತು ವಿನಾಶಕಾರಿ ನಡತೆ, ತರಗತಿಯಲ್ಲಿ ಕೀಟಲೆ ಅಥವಾ ತೊಂದರೆ ಕೊಡುವುದು, ಶಾಲಾ ಪ್ರಗತಿಯಲ್ಲಿ

ಹಿನ್ನಡೆ, ಮನಸ್ಸನ್ನು ಕೇಂದ್ರೀಕರಿಸಲು ಕಷ್ಟವಾಗುವುದು, ಶಾಲೆಯಿಂದ ಹೊರಗೆ ಉಳಿಯುವುದು, ಶಾಲೆಯ ಬಗ್ಗೆ ಭಯ ಸ್ವಪ್ರತಿಷ್ಠೆಯ ಅಭಾವ, ನಿರಂತರ ಭಯ ಆತಂಕ, ತುಮುಲ, ಆಗಾಗ ದೂರು, ಖಿನ್ನತೆ, ಆತ್ಮಹತ್ಯೆ ಹಾಗೂ ಶಿಕ್ಷಕರ ಮೇಲೆ ತಿರುಗಿ ಬೀಳುವಂತಹ ನಡತೆಗಳಿಗೆ ಕಾರಣವಾಗುತ್ತದೆ. ಇದು ಭಾವನಾತ್ಮಕವಾಗಿ ಭವಿಷ್ಯದ ಬಗ್ಗೆ ಆತಂಕ ಉಂಟುಮಾಡುತ್ತದೆ.

**ಮಕ್ಕಳ ಧನಾತ್ಮಕ ಬೆಳವಣಿಗೆಗೆ ಕೆಲವು ನಿರ್ದಿಷ್ಟ ಚಟುವಟಿಕೆಯ ಮಾರ್ಗಸೂಚಿಗಳು**

**1) ತರಗತಿಯಲ್ಲಿ ಕ್ಲಿಷ್ಟ ಪರಿಸ್ಥಿತಿಯನ್ನು ಎದುರಿಸುವುದು.**

* ತರಗತಿಯಲ್ಲಿ ಕೆಲವು ಮಕ್ಕಳು ಈ ಕೆಳಗಿನ ವಿಷಯಗಳಲ್ಲಿ ಸಮಸ್ಯಾತ್ಮಕವಾಗಿ ಪರಿಗಣಿಸಲ್ಪಡುತ್ತಾರೆ.
* ಸಮಯ ಪಾಲನೆ ಅಥವಾ ಶುಚಿತ್ವ ಶಿಸ್ತು ಪಾಲನೆ
* ಕಲಿಕೆಗೆ ಸಂಬಂಧಪಟ್ಟ ಸಮಸ್ಯೆಗಳು ಮನೆಕೆಲಸ ಮಾಡದೆ ಇರುವುದು, ಬಹಳ ಕೆಳಮಟ್ಟದ ಪ್ರಗತಿ, ಪುಸ್ತಕಗಳು ತರದೆ ಇರುವುದು.
* ತರಗತಿಯಲ್ಲಿ ಶಿಸ್ತು ಮತ್ತು ಶಿಕ್ಷಕರ / ಹಿರಿಯರ ನಿರೀಕ್ಷೆ - ಪಾಠದ ಮೇಲೆ ಗಮನ, ಮಾತನಾಡುವುದು, ಗಲಾಟೆ ಮಾಡುವುದು ಇತ್ಯಾದಿ.
* ತೊಂದರೆಯ ನಡತೆ ಇತರೆ ಮಕ್ಕಳಿಗೆ ಪೀಡಿಸುವುದು, ಸುಳ್ಳು ಹೇಳುವುದು, ಕದಿಯುವುದು, ಕೆಣಕುವ ಗುಣ ನಡತೆ, ಇತರರಿಗೆ ನೋವು ಮಾಡುವುದು, ಹೊಡೆಯುವುದು, ನಷ್ಟ ಪೀಡಿಸುವುದು

**2) ಮಕ್ಕಳನ್ನು ಧನಾತ್ಮಕ ಚಟುವಟಿಕೆಯಲ್ಲಿ ತೊಡಗಿಸುವ ಬಗ್ಗೆ ಮಾರ್ಗಸೂಚಿಗಳು**

* ದೈಹಿಕ ಹಿಂಸೆ ಕೊನೆಯ ಕ್ರಮ ಎಂದು ಗುರುತಿಸುತ್ತಾರೆ. ಆದರೆ ಹಿಂಸೆ ಅನುಭವಿಸುವ ಮಕ್ಕಳು ಪ್ರತ್ಯೇಕ ಕೌಟುಂಬಿಕ ಹಿನ್ನಲೆಯಿಂದ ಬಂದಿರುವುದರಿಂದ ಅವರನ್ನು ತರಗತಿಯಲ್ಲಿ ಧನಾತ್ಮಕ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವುದು ಮುಖ್ಯ.
* ಮಕ್ಕಳು ತಪ್ಪು ಮಾಡಿದಾಗ ತಿದ್ದಲು ಅನುಸರಿಸುವ ವಿಧಾನದ ಬಗ್ಗೆ ಸ್ಪಷ್ಟವಿರಬೇಕು. ಶಿಕ್ಷೆಯ ಬದಲು ಮಕ್ಕಳನ್ನು ಅವರ ನಡತೆಯನ್ನು ಬದಲಿಸುವ ಮಾರ್ಗದಲ್ಲಿ ಭಾಗವಹಿಸುವಿಕೆ ಮುಖ್ಯ. ಶಿಕ್ಷೆ ತಡೆಗಟ್ಟುವ ವಿಧಾನಗಳಾದ ಜೀವನ ಕೌಶಲ್ಯ ಕಾರ್ಯಕ್ರಮಗಳನ್ನು ಅಳವಡಿಸಿ ಮಗುವಿ ಒಟ್ಟಾರೆ ಅಭಿವೃದ್ಧಿಗೆ ಒತ್ತು ನೀಡಬೇಕಾಗಿದೆ.
* ಕ್ಲಿಷ್ಟ ಪರಿಸ್ಥಿತಿಯಲ್ಲಿ ಸಮಸ್ಯೆಯನ್ನು ಮಗು / ಕುಟುಂಬ ಹಾಗೂ ಶಾಲೆಯ ನಡುವೆ ಅಥವಾ ಮಕ್ಕಳ ಪರಿಷತ್ತಿನ ಮುಖಾಂತರ ಪರಿಹರಿಸಬೇಕು. ತುಂಬಾ ಕ್ಲಿಷ್ಟ ಸಮಸ್ಯೆಯು ಮಗುವಿನ ಮಾನಸಿಕ ವಿಷಯವಾಗಿರುವುದರಿಂದ ಪರಿಣಿತರ ಸಲಹೆ ಸಹಾಯ ಪಡೆಯುವುದು ಮುಖ್ಯ.

**3) ಮಗುವಿಗೆ ಶಿಕ್ಷೆಯ ಬದಲು ಸಹಾಯ ಬೇಕು ಎಂಬುದನ್ನು ಅರಿಯುವುದು.**

* ಮಗುವಿನ ನಡತೆಗೆ ಕುಟುಂಬದ ವಾತಾವರಣ, ಮನೆಯಲ್ಲಿನ ಶಿಸ್ತು, ಪಾಲಕರ ನಡುವಿನ ಒತ್ತಡ, ಕುಟುಂಬದ ಸಮಸ್ಯೆ ಕಾರಣವಾಗಿರುವುದರಿಂದ ಮಗುವನ್ನು ಅರ್ಥೈಸಿ ಸಹಾಯ, ರಕ್ಷಣೆ ನೀಡುವುದು ಮುಖ್ಯ.

**4) ಮಕ್ಕಳ ಹಕ್ಕುಗಳ ರಕ್ಷಣೆಯಲ್ಲಿ ಶಿಕ್ಷಕರನ್ನು ಸಜ್ಜುಗೊಳಿಸುವುದು.**

* ಮಗುವಿನ ದುರ್ನಡತೆಯನ್ನು ತಡೆಯುವುದು ಉತ್ತಮ ವಿಧಾನ. ಹಾಗಾಗಿ ಮಕ್ಕಳ ಸ್ನೇಹಿ ಪರಿಸರ ಸೃಷ್ಟಿಸುವುದು, ಮಕ್ಕಳೊಂದಿಗೆ ವರ್ತಿಸುವ ಮಕ್ಕಳನ್ನು ಅಭಿವೃದ್ಧಿಪಡಿಸುವ ಕೌಶಲ್ಯ, ತರಬೇತಿ ಶಿಕ್ಷಕರಿಗೆ ಕ್ರಮವತ್ತಾಗಿ ಕೊಡಬೇಕು. ಶಾಲೆಯಲ್ಲಿ ಮಕ್ಕಳ ಮತ್ತು ಶಿಕ್ಷಕರ ಸರಿಯಾದ ಅನುಪಾತವನ್ನು ಕಾಪಾಡುವುದು ಅಗತ್ಯ.

**5) ಮಕ್ಕಳಿಗೆ ಉತ್ತೇಜನ ನೀಡಿ, ಹಕ್ಕು ರಕ್ಷಣೆ ಮಾಡುವುದು, ಮಕ್ಕಳನ್ನು ಪ್ರಜಾಸತ್ತಾತ್ಮಕ ರೀತಿಯಲ್ಲಿ ಭಾಗವಹಿಸಲು ಉತ್ತೇಜಿಸುವುದು.**

* ಮಕ್ಕಳನ್ನು ಪ್ರತಿ ಹಂತದಲ್ಲಿ ತೊಡಗಿಸಿಕೊಳ್ಳುವುದರಿಂದ ಸಮಸ್ಯೆಯನ್ನು ಹತೋಟಿಯಲ್ಲಿಡಬಹುದು. ಮಕ್ಕಳ ಹಕ್ಕುಗಳ ರಕ್ಷಣೆಯಾಗುವ ಖಾತ್ರಿಯೊಂದಿಗೆ ಮಗುವಿನ ಅನಿಸಿಕೆಗಳನ್ನು ಗಣನೆಗೆ ತೆಗೆದುಕೊಂಡು ಶಿಕ್ಷಕರು ಮತ್ತು ಮಕ್ಕಳು ಒಪ್ಪಂದಕ್ಕೆ ಬರುವುದು.

**6) ಬಹುಮುಖಿ ವಿಧಾನಗಳಿಂದ ಮಕ್ಕಳ ಸಮಸ್ಯೆಯನ್ನು ಪರಿಹರಿಸುವುದು. ಇದಕ್ಕಾಗಿ ಬೇಕಾದ ಎಲ್ಲಾ**

**ಜವಾಬ್ದಾರಿಯುತರೊಡನೆ ಜಾಲಬಂಧ ಏರ್ಪಡಿಸುವುದು.**

**7) ಧನಾತ್ಮಕ ತೊಡಗಿಸುವಿಕೆ**

ಮಕ್ಕಳಲ್ಲಿ ಸಂಬಂಧಗಳನ್ನು, ನಡತೆಯನ್ನು ಉತ್ತಮಪಡಿಸಲು ಶೈಕ್ಷಣಿಕವಾಗಿ ಪ್ರಗತಿ ಸಾಧಿಸಲು, ಭಾವನೆಗಳ ಮೇಲೆ ಹತೋಟಿ ಸಾಧಿಸಲು ಜೀವನ ಕೌಶಲ್ಯ ತರಬೇತಿ ನಡೆಸುವುದು.

ಉದಾಹರಣೆಗೆ -

* ಸಹಾನುಭೂತಿ ಸೃಷ್ಟಿಸುವುದು.
* ಸಾಮಾಜಿಕ ಸಮಸ್ಯೆ ಪರಿಹರಿಸುವ ಕೌಶಲ್ಯ
* ಒತ್ತಡ ಮತ್ತು ಭಾವನಾತ್ಮಕ ಸಮಸ್ಯೆಗಳೊಂದಿಗೆ

**8) ಶಾಲಾಡಳಿತ ಜವಾಬ್ದಾರಿ :- ಮಕ್ಕಳ ದೈಹಿಕ ದಂಡನೆ ಕೊನೆಗೊಳಿಸುವಲ್ಲಿ ಸೂಕ್ತ ನಿಯಮಗಳನ್ನು ಮಾಡಿ ಪ್ರತಿ ಸಿಬ್ಬಂಧಿಯು ಅದನ್ನು ಪಾಲಿಸುವಂತೆ ಹಾಗೂ ಮಗು ಸ್ನೇಹಿ ವಿಧಾನಗಳನ್ನು ಅನುಸರಿಸಿ ಮಕ್ಕಳ ರಕ್ಷಣೆಗೆ ಬದ್ಧರಾಗುವಂತೆ ಮಾಡುವುದು.**

**9) ಕಲಿಕೆಗೆ ಸೂಕ್ತ ಹಾಗೂ ಉತ್ತೇಜಿತ ಪರಿಸರ ನಿರ್ಮಿಸುವುದು.**

* ಶಾಲಾಡಳಿತ ಹಾಗೂ ಶಿಕ್ಷಕರಿಗೂ ಮಕ್ಕಳ ಹಕ್ಕುಗಳ ಬಗ್ಗೆ ತಿಳಿಯಪಡಿಸಬೇಕು. ಈ ನಿಟ್ಟಿನಲ್ಲಿ ಕಾಲಕಾಲಕ್ಕೆ ತರಬೇತಿಗಳನ್ನು ಆಯೋಜಿಸುವುದು.
* ಪ್ರತಿ ಹಂತದಲ್ಲಿ ಮಕ್ಕಳ ಭಾಗವಹಿಸುವಿಕೆ ಖಾತ್ರಿ ಪಡಿಸುವುದು.
* ಮಕ್ಕಳಿಗೂ ಅವರ ಹಕ್ಕುಗಳ ಬಗ್ಗೆ ಹೇಳುವುದು ಮತ್ತು ದೈಹಿಕ ಹಿಂಸೆ ಬಗ್ಗೆ ದೂರು ನೀಡಲು ಉತ್ತೇಜಿಸುವುದು.
* ಶಿಕ್ಷಕರು ಮಕ್ಕಳನ್ನು ದಂಡಿಸದಿರಲು ಬದ್ಧರಿದ್ದೇವೆ ಎಂಬ ವಾಗ್ದಾನ ಬರವಣಿಗೆಯಲ್ಲಿ ಕೊಡುವುದು.
* ದಂಡನೆಯನ್ನು ಕೊನೆಗೊಳಿಸಲು ಹಂತ ಹಂತವಾಗಿ ವಿಧಾನಗಳನ್ನು ಹಾಕಿಕೊಳ್ಳಬೇಕು.

**10) ದೈಹಿಕ ದಂಡನೆ ಬಗ್ಗೆ ಮಕ್ಕಳ ಅಭಿಪ್ರಾಯಗಳಿಗೆ ಅನುವು ಮಾಡಿಕೊಡುವುದು.**

* ಮಕ್ಕಳಿಗೆ ವೈಯಕ್ತಿಕವಾಗಿ ಅಥವಾ ಸರ್ವಾನುಮತದಲ್ಲಿ ತಮ್ಮ ಅಭಿಪ್ರಾಯ ವ್ಯಕ್ತಪಡಿಸಲು ಅವಕಾಶ ಮಾಡುವುದು. ಪ್ರತಿ ಶಾಲೆಯಲ್ಲಿ ದೂರು ಪೆಟ್ಟಿಗೆ ಇರಿಸಿ ಗೊತ್ತುಪಡಿಸಿದ ದಿನದಂದು ತೆರೆದು ಇತ್ಯರ್ಥಗೊಳಿಸುವುದು.
* ಶಾಲಾಡಳಿತ ತರಗತಿ ಸಮಿತಿಗಳನ್ನು ರಚಿಸಿ ಮಕ್ಕಳು ಸೃಜನಾತ್ಮಕ ಚಟುವಟಿಕೆಯಲ್ಲಿ ತೊಡಗುವಂತೆ ಮಾಡುವುದು.
* ಮಕ್ಕಳ ಸಂಸತ್ತು, ಮಕ್ಕಳ ಹಕ್ಕುಗಳ ರಕ್ಷಣೆಗೆ ಪೂರಕವಾಗುವಂತೆ ನೀತಿ ಸಂಹಿತೆಯನ್ನು ರಚಿಸಿ ಅದು ಕಾರ್ಯಗತವಾಗುವಂತೆ ನೋಡಬೇಕು.
* ಬರುವ ದೂರು ಹಾಗೂ ಅಸಮಾಧಾನಗಳನ್ನು ಪರಿಹರಿಸಲು ಬೇಕಾದ ವ್ಯಕ್ತಿಗಳ ಅಧಿಕಾರ ಇತಿಮಿತಿ ಹಾಗೂ ನೀತಿಗಳನ್ನು ರಚಿಸುವುದು.
* ಶಾಲಾಡಳಿತ ಸಮಿತಿಯು ದೈಹಿಕ ಶಿಕ್ಷೆ ಉಸ್ತುವಾರಿ ಸಮಿತಿಯನ್ನು ರಚಿಸಿ ಬರುವ ದೂರುಗಳನ್ನು ನೋಡಬೇಕು.

**ತಾರತಮ್ಯವೆಂದರೆ ಪೂರ್ವಾಗ್ರಹ ಪೀಡಿತ ಭಾವನೆಗಳು**

* ಮಗುವಿನ ಹಿನ್ನಲೆ, ಲಿಂಗ, ಜಾತಿ, ಪ್ರವೇಶ ಶುಲ್ಕ ಪಾವತಿಸದೆ ಇರುವುದು, ಮೀಸಲಾತಿ ಆಧಾರದಲ್ಲಿ ಪೂರ್ವಾಗ್ರಹ ಪೀಡಿತ ಭಾವನೆಗಳು ಮತ್ತು ಕೃತ್ಯಗಳು ಅವು ನೇರ ಅಥವಾ ಅಪ್ರತ್ಯಕ್ಷವಾಗಿರಬಹುದು.
* ಸಾಮಾಜಿಕ ಅಥವಾ ಸಮುದಾಯದಲ್ಲಿನ ತಾರತಮ್ಯದ ಭಾವನೆಯನ್ನು ಶಾಲೆಯಲ್ಲಿ / ಸಂಸ್ಥೆಯಲ್ಲಿಯೂ ತರುವುದು.
* ಶಾಲೆಯಲ್ಲಿ ಜಾತಿ, ಆರ್ಥಿಕ ಪರಿಸ್ಥಿತಿ, ಲಿಂಗದ ಆಧಾರದ ಮೇಲೆ ಪ್ರತ್ಯೇಕ ಚಟುವಟಿಕೆಗಳನ್ನು ಅಥವಾ ಸ್ಥಳಗಳನ್ನು ನೀಡುವುದು.
* ಜಾತಿ ಅಥವಾ ಸಮುದಾಯದ ಹಿನ್ನಲೆ ಉಪಯೋಗಿಸಿ ಶೈಕ್ಷಣಿಕ ಪ್ರಗತಿ ಮೇಲೆ ವಕ್ಕನೆ ಹಚ್ಚುವುದು.
* ವಿಶ್ವಸಂಸ್ಥೆಯ ಮಕ್ಕಳ ಹಕ್ಕುಗಳ ಸಮಿತಿಯು ದೈಹಿಕ ಶಿಕ್ಷೆಯನ್ನು ಮಗುವಿಗೆ ನೋವು ಮುಜುಗರ ಉಂಟುಮಾಡುವ ದೈಹಿಕ

ಮಾನಸಿಕ ಒತ್ತಡ ಉಂಟುಮಾಡುವುದು ಎಂದು ವ್ಯಾಖ್ಯಾನಿಸುತ್ತದೆ. ಇಂತಹ ದೈಹಿಕ ಶಿಕ್ಷೆ ಕೀಳು ಹಾಗೂ ಕ್ರೂರ.

**ಶಾಲೆಗಳಲ್ಲಿ ದೈಹಿಕ ಹಿಂಸೆ ಕೊನೆಗೊಳಿಸಲು ಮಾರ್ಗಸೂಚಿಗಳು**

* ಮಕ್ಕಳ ರಕ್ಷಣೆ ಮತ್ತು ಪೋಷಣೆ ಮಾಡಬೇಕಾದ ಶಾಲೆ ಹಾಸ್ಟೆಲ್ ಅನಾಥಾಲಯ ಬಾಲಮಂದಿರ ಹಾಗೂ ಕುಟುಂಬದಂತಹ ಸಂಸ್ಥೆಗಳಲ್ಲಿ ಮಕ್ಕಳು ದೈಹಿಕ ಹಿಂಸೆಗೆ ಒಳಪಡುತ್ತಾರೆ. ಭಾರತ ಸರ್ಕಾರದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಮಂತ್ರಾಲಯ ನಡೆಸಿದ Child Abuse in India 2007 ಎಂಬ ಸಮೀಕ್ಷೆ ಪ್ರಕಾರ 69% ಮಕ್ಕಳು ದೈಹಿಕ ಹಿಂಸೆ ಅನುಭವಿಸುವುದು ದೃಢಪಟ್ಟಿದೆ.
* ಕಾನೂನಿನ ಜೊತೆ ಸಂಘರ್ಷದಲ್ಲಿರುವ ಮಕ್ಕಳಲ್ಲಿ 70.20% ಮಕ್ಕಳ ರಕ್ಷಣೆ ಮತ್ತು ಪೋಷಣೆಯ ಅಗತ್ಯವಿರುವ 52.68% ಮಕ್ಕಳು ದೈಹಿಕ ಹಿಂಸೆ ಅನುಭವಿಸಿದ್ದಾರೆ.
* ಈ ಸಂಸ್ಥೆಗಳಲ್ಲಿ ಸಾಮಾಜಿಕ, ಆರ್ಥಿಕ, ಧಾರ್ಮಿಕ ಹಾಗೂ ಭಾಷಿಕ ಹಿನ್ನೆಲೆಯ ಮೇಲೆ ಹಾಗೂ ರೋಗ ಮತ್ತು ದೈಹಿಕ ಅಂಗವಿಕಲತೆಯ ಆಧಾರದ ಮೇಲೆ ಹಿಂಸೆ, ತಾರತಮ್ಯ ಅನುಭವಿಸಿರುವುದು ದಾಖಲೆಗಳಿಂದ ದೃಢಪಟ್ಟಿದೆ.
* ಮಾನಸಿಕ ಹಿಂಸೆ ಮತ್ತು ಕ್ರೌರ್ಯ ಹಿಂಸೆಯ ರೂಪಗಳನ್ನು ಒಳಗೊಂಡಿದೆ.

**ಮಗುವನ್ನು ತಿದ್ದಲು ಈ ಕೆಳಗಿನ ವಿಧಾನಗಳನ್ನು ಬಳಸಬಹುದು.**

* ಮಕ್ಕಳ ನಡತೆ ಹಾಗೂ ಅದರ ಪರಿಣಾಮಗಳ ಬಗ್ಗೆ ಚರ್ಚಿಸಿ ನಿರ್ಧರಿಸುವುದು.
* ನೀತಿ ನಿಯಮಗಳನ್ನು ಮಕ್ಕಳೊಂದಿಗೆ ಚರ್ಚಿಸಿ ಮಾಡುವುದು.
* ಪ್ರತಿ ಮಗುವಿನ ಧನಾತ್ಮಕ ನಡತೆಯನ್ನು ಉತ್ತೇಜಿಸಲು ಭಿನ್ನ ವಿಧಾನಗಳನ್ನು ಪಾಲಿಸುವುದು.
* ಮಗುವಿನ ಪ್ರಗತಿಯನ್ನು ಇತರ ಮಕ್ಕಳೊಂದಿಗೆ ಹೋಲಿಸದಿರುವುದು.
* ಇತಿಮಿತಿಗಳನ್ನು ಸ್ಪಷ್ಟಪಡಿಸುವುದು.
* ಮುನ್ನೆಚ್ಚರಿಕೆಗಳನ್ನು ಕೊಡುವುದು.
* ಮಕ್ಕಳಿಗೆ ವಿವರಣೆ ನೀಡಲು ಅವಕಾಶ ನೀಡುವುದು.
* ಮಗುವಿನ ವಿವರಣೆಯನ್ನು ಶಾಂತ ಚಿತ್ತದಿಂದ ಆಲಿಸುವುದು ಮತ್ತು ಇತರ ಮಕ್ಕಳ ಸುರಕ್ಷತೆಯನ್ನು ಖಾತ್ರಿ ಪಡಿಸುವುದು.

**ಅಪರಾಧಿ ಅಥವಾ ವಿನಾಶಕಾರಿ ನಡತೆಯನ್ನು ತಿದ್ದುವಾಗ**

* ಪಾಲಕರ ಜೊತೆ ಚರ್ಚಿಸಿ ಮಗುವಿನ ನಡತೆ ಬಗ್ಗೆ ಕ್ರಮ ವಹಿಸುವುದು.
* ಮಗುವಿನೊಂದಿಗೆ ಚರ್ಚಿಸಿ ನಡತೆ ತಿದ್ದಿಕೊಳ್ಳಲು ಕಾಲಾವಕಾಶ ನೀಡುವುದು.
* ಧನಾತ್ಮಕ ಚಟುವಟಿಕೆಗಳಲ್ಲಿ ತೊಡಗಿಸುವುದು.
* ಸಣ್ಣಪುಟ್ಟ ವಿಷಯಗಳನ್ನು ಕಡೆಗಣಿಸುವುದು.
* ಸ್ಪಷ್ಟ ಮಿತಿಗಳನ್ನು ಗೊತ್ತುಪಡಿಸುವುದು.
* ನಡತೆ ಮುಂದುವರಿದಲ್ಲಿ ಪುರಸ್ಕಾರಗಳನ್ನು ಕಡಿತಗೊಳಿಸುವುದು.

**ಹೊಣೆಗಾರಿಕೆ ಬಹು ವಿಭಾಗೀಯ ಜವಾಬ್ದಾರಿಗಳು**

* ಪರಿಹಾರದ ಹಕ್ಕು ಎಂದರೆ ಸಮಾನ ಮತ್ತು ಪರಿಣಾಮಕಾರಿಯಾದ ನ್ಯಾಯ ಲಭ್ಯತೆ.
* ನೋವು ನಷ್ಟಕ್ಕೆ ಸರಿಯಾದ ಪರಿಹಾರ.
* ಸೂಕ್ತ ಮಾಹಿತಿಯ ಲಭ್ಯತೆ ಸರಿಯಾಗಿ ಭರಿಸುವುದು, ಪರಿಹಾರ ಹಾಗೂ ಪುನರ್ವಸತಿ ಒಳಗೊಂಡಿದೆ.
* ಪ್ರತಿ ಶಾಲೆ, ಹಾಸ್ಟೆಲ್, ಬಾಲಮಂದಿರಗಳು ವಶಕ್ಕಿರುವ ಮಕ್ಕಳ ಪಾಲನೆ ಪೋಷಣೆ ಜವಾಬ್ದಾರಿಯನ್ನು ಅರ್ಥಮಾಡಿಕೊಳ್ಳಬೇಕು.

ಪ್ರಕಟಣೆ: **ಗುಣಮಟ್ಟದ ಶಿಕ್ಷಣಕ್ಕಾಗಿ ಮಗು ಸ್ನೇಹಿ ಸಮಾಜ ನಿರ್ಮಾಣ**

**ಪಡಿ, ಗಣೇಶ್ ಕುಲಾಸೊ ಆಸ್ಪತ್ರೆಯ ಬಳಿ, 2ನೇ ಅಡ್ಡ ರಸ್ತೆ ಬೆಂದೊರ್ ವೆಲ್, ಮಂಗಳೂರು-2 ದೂರವಾಣಿ 0824-2439895**